UASB LIBRARY
Newspaper Clippings
Pg .1 Saturday 12-06-2021 Jai Kisan



ರೇಷ್ಮೆ ಗೂಡಿಗೆ ಬೆಂಬಲ ಬೆಲೆ ಇಲ್ಲ

ರಾಮನಗರ: ರೇಷ್ಮೆ ಗೂಡಿನ ಬೆಲೆ ಸುಧಾರಿಸಿರುವ ಹಿನ್ನೆಲೆಯಲ್ಲಿ ಬೆಂಬಲ ಬೆಲೆ ನೀಡುವ ಪ್ರಸ್ತಾಪ ಸರಕಾರದ ಮುಂದಿಲ್ಲ ಎಂದು ರೇಷ್ಮೆ ಸಚಿವ ಆರ್.ಶಂಕರ್ ಸ್ಪಷ್ಟಪಡಿಸಿದ್ದಾರೆ.



ನಗರದ ರೇಷ್ಮೆಗೂಡು ಮಾರುಕಟ್ಟೆಗೆ ಶುಕ್ರವಾರ ಭೇಟಿ ನೀಡಿದ್ದ ಸಚಿವರು, ಮಾರುಕಟ್ಟೆಯಲ್ಲಿದ್ದ ಬೆರಳೆಣಿಕೆಯಷ್ಟು ಮಂದಿ ರೈತರೊಂದಿಗೆ ಸಂವಾದದ ಶಾಸ್ತ್ರಮುಗಿಸಿದರು. ಬಳಿಕ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, ಮಾರುಕಟ್ಟೆಯ ವಸ್ತು ಸ್ಥಿತಿ ತಿಳಿಯಲು ಪರಿಶೀಲನೆ ನಡೆಲಾಗಿದೆ. ಸದ್ಯ ರೇಷ್ಮೆ ದರ ಸುಧಾರಿಸಿದೆ. ಟೊಮೇಟೊ ಬೆಲೆ ಕುಸಿದಿದ್ದರೂ, ಗುಣಮಟ್ಟದ ಆಧಾರದಲ್ಲಿ ಬೆಲೆ ಸಿಗುತ್ತಿದೆ ಎಂದರು. ಸಂಕಷ್ಟದಲ್ಲಿರುವ ತರಕಾರಿ ಬೆಳೆಗಾರರಿಗೆ 76 ಕೋಟಿ, ಹೂವು ಬೆಳೆಗಾರರಿಗೆ 6 ಕೋಟಿ ರೂ. ಪರಿಹಾರ ನೀಡಲಾಗಿದೆ. ಸಮರ್ಪಕ ಮಾಹಿತಿ ನೀಡದ ಹಿನ್ನೆಲೆಯಲ್ಲಿ ಶೇ.10ರಷ್ಟು ರೈತರಿಗಷ್ಟೇ ಸಹಾಯಧನ ತಲುಪಿಲ್ಲ. ಅದನ್ನು ಪಡೆಯಲು ಅವರಿಗೆ ಈಗಲೂ ಅವಕಾಶವಿದೆ. ಸರಿಯಾದ ಮಾಹಿತಿ ಒದಗಿಸಿ ಸಹಾಯಧನ ಪಡೆಯಬಹುದು ಎಂದರು.

12-06-2021
Hd Pg 04

ಹೊಲಕ್ಕೆ ಕೃಷಿ ವಿಜ್ಞಾನಿಗಳ ಭೇಟಿ ಕಡ್ಡಾಯ

ರಾಮನಗರ: ಕೃಷಿ ವಿಶ್ವವಿದ್ಯಾಲಯಗಳ ವಿಜ್ಞಾನಿಗಳು, ಅಧ್ಯಾಪಕರು ತಿಂಗಳಲ್ಲಿ ಕನಿಷ್ಠ 2 ದಿನ ಹೊಲಗಳಿಗೆ ಭೇಟಿ ನೀಡಿ ರೈತರ ಸಮಸ್ಯೆ ಆಲಿಸಬೇಕು. ರಸಗೊಬ್ಬರ, ಬಿತ್ತನೆ ಬೀಜದ ಕೃತಕ ಅಭಾವ ಸೃಷ್ಟಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಿದಲ್ಲಿ ಅಂತಹವರ ವಿರುದ್ಧ ಮುಲಾಜಿಲ್ಲದೆ ಕ್ರಮ ಕೈಗೊಳ್ಳಿ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ಹೇಳಿದರು.

ನಗರದ ಜಿಪಂನಲ್ಲಿ ಶುಕ್ರವಾರ ಅಧಿಕಾರಿಗಳ ಜತೆ ಸಭೆ ನಡೆಸಿದ ಸಚಿವರು, ಕೃಷಿ ಸಮಸ್ಯೆ ನಿವಾರಿಸಲು ವಿಜ್ಞಾನಿಗಳು, ಅಧ್ಯಾಪಕರು ರೈತ ಸ್ನೇಹಿಯಾಗಿ ಕೆಲಸ ಮಾಡಬೇಕು ಎಂದು ಸೂಚನೆ ನೀಡಿದರು.

12-06-2021
Hd Pg 04

For more information visit
University Library Website
Web - uasbagrilibindia.org
E-mail- librarian@uasbangalore.edu.in